## ನಿಸ್ವಾರ್ಥತೆಯ ನೈಜ ಬದುಕು

೧೯೭೩ರಲ್ಲಿ ಮಧ್ಯಪ್ರದೇಶದ ಹೊಂಷಂಗಾಬಾದ್ ಮತ್ತು ಬೆಟುಲ್ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ಜೀವಿಸುತ್ತಿರುವ ಬುಡಕಟ್ಟು ಜನಾಂಗದ ೫೦,೦೦೦ ಜನರು ಭಯಂಕರವಾದ ಸ್ಥಿತಿಯನ್ನು ಎದುರಿಸಬೇಕಾಗಿ ಬಂತು. ತವಾ ಎಂಬಲ್ಲಿ ನರ್ಮದಾ ನದಿಗೆ ಕಟ್ಟಲಾಗುತ್ತಿದ್ದ ಅಣೆಕಟ್ಟಿನ ಸಲುವಾಗಿ ಸತ್ಪುರ ಪರ್ವತಶ್ರೇಣಿಯ ತಪ್ಪಲಿನಲ್ಲಿ ವಾಸಿಸುತ್ತಿದ್ದ, ಕೊರ್ಕು ಮತ್ತು ಗೊಂಡ ಬುಡಕಟ್ಟು ಜನಾಂಗದ ಜನ ರಾತ್ರೋರಾತ್ರಿ ತಮ್ಮ ಹೊಲಗಳನ್ನು ಕಳೆದುಕೊಂಡರು. ತಮ್ಮ ನಾಡಿನಲ್ಲೇ ಅವರು ಅಪರಿಚಿತರಾಗಿ ಹೋದರು.

ಆಗೊಬ್ಬ ಯುವಕ ಅವರ ಸಹಾಯಕ್ಕೆ ಬಂದರು. ಅವರ ಹೆಸರು ಸುನೀಲ್. ಅವರು ಆ ನತದೃಷ್ಟ ಜನರ ಮಧ್ಯೆ ಬಾಳಿದರು. ಅವರನ್ನು ಸಂಘಟಿಸಿ ಮೀನುಗಾರಿಕಾ ಸಹಕಾರಿ ಸಂಘವೊಂದನ್ನು ಕಟ್ಟಿದರು. ಆ ಬಡಜನರು ಸ್ವಾವಲಂಬಿಗಳಾಗುವಂತೆ ಮಾಡಿ ಅವರ ಆಪದ್ಬಾಂಧವರಾದರು ಎಂದು **ದಿ ವೀಕ್** ಎಂಬ ವಾರಪತ್ರಿಕೆ ವರದಿ ಮಾಡಿದೆ.

ಸುನೀಲ್ ದೆಹಲಿಯ ನೆಹರು ವಿಶ್ವವಿದ್ಯಾನಿಲಯದ ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವೀಧರ. ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಹೊಂಷಂಗಾಬಾದಿಗೆ ಬಂದರು. ಬರಿಯ ಬೌದ್ಧಿಕ ಅಧ್ಯಯನ ಅವರಿಗೆ ರುಚಿಸಲಿಲ್ಲ, ಏನಾದರೂ ಸೇವಾಕಾರ್ಯ ಮಾಡಬೇಕೆಂದು ಪಣ ತೊಟ್ಟರು.

೧೯೭೦ರ ಮೊದಲ ಭಾಗದಲ್ಲಿ ಕಟ್ಟಲಾದ ತವಾ ಅಣೆಕಟ್ಟು ಹಳ್ಳಿಗಳನ್ನು ಮುಳುಗಿಸಿಬಿಟ್ಟಿತ್ತು. ಆದರೆ ಪುನರ್ವಸತಿ ಪಡೆದ ಸ್ಥಳದಲ್ಲಿಯೇ ನೀರಿನ ಅಭಾವ. ಮೇ ೧, ೧೯೮೫ರಲ್ಲಿ ಸುನೀಲ್ **ನೀರಿಗಾಗಿ ಸಂಘರ್ಷ** ಎಂಬ ಹೆಸರಿನ ಚಳುವಳಿಯನ್ನು ನಡೆಸಿದರು. ಅದರ ಯಶಸ್ಸಿನಿಂದ ಉತ್ತೇಜನಗೊಂಡು ಅದೇ ವರ್ಷ ಡಿಸೆಂಬರ್ ೨೫ರಂದು ಆದಿವಾಸಿಗಳ ಸಮ್ಮೇಳನವೊಂದನ್ನು ನಡೆಸಿದರು. ಸುತ್ತಮುತ್ತಲಿನ ನೂರು ಗ್ರಾಮಗಳಿಂದ ೧೫೦೦ಕ್ಕೂ ಹೆಚ್ಚು ಜನರನ್ನು ಸಂಘಟಿಸಿದರು. ಹೀಗೆ **ಕಿಸಾನ್ ಆದಿವಾಸಿ ಸಂಘಟನ್** ಎಂಬ ಸಂಸ್ಥೆಯು ಜನ್ಮತಾಳಿತು.

ಜನವರಿ ೧, ೧೯೯೭ರಲ್ಲಿ ಆರಂಭವಾದ ಮೀನುಗಾರಿಕಾ ಉತ್ಪನ್ನಗಳ ಮಾರಾಟ ಸಹಕಾರ ಸಂಘದ ವತಿಯಿಂದ ಮಧ್ಯವರ್ತಿಗಳ ಕಾಟವೂ ತಪ್ಪಿದೆ. ಈ ಜನರಿಗೆ ತಾವು ಹಿಡಿದ ಮೀನುಗಳಿಗೆ ಸಮರ್ಪಕವಾದ ಮಾರುಕಟ್ಟೆ ದೊರಕಿದೆ.

ಆದಿವಾಸಿಗಳ ಹಲವಾರು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ನಡೆಸುತ್ತಿರುವ ಸುನೀಲ್, ಈ ಸಂಬಂಧ ಕೆಲವು ಸಾರಿ ಜೈಲಿಗೆ ಕೂಡ ಹೋಗಿದ್ದಾರೆ. ಸರ್ಕಾರದ ದುರಾಡಳಿತ ಮತ್ತು ನೌಕರಶಾಹಿಯ ಭ್ರಷ್ಟಾಚಾರಗಳ ವಿರುದ್ಧ ಸಮರ ನಡೆಸಿ ವಿಜಯಿಯಾಗಿದ್ದಾರೆ. ಏನೂ ಅರಿಯದ ಮುಗ್ಧ ಆದಿವಾಸಿ ಜನರಲ್ಲಿ ಸ್ವಾವಲಂಬನೆಯ ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಮನೋಧೈರ್ಯವನ್ನು ತುಂಬಿದ್ದಾರೆ.

ಸ್ವಾಮಿ ವಿವೇಕಾನಂದರು "ಯಾರು ಇತರರಿಗಾಗಿ ಬದುಕುತ್ತಾರೋ, ಅವರದೇ ನಿಜವಾದ ಜೀವನ, ಉಳಿದವರೆಲ್ಲ ಜೀವಂತ ಶವಗಳು" ಎಂದು ಹೇಳುತ್ತಾರೆ. ಇತರರಿಗೆ ನೆರವಾಗುತ್ತ ಹೇಗೆ ಬಾಳಬೇಕೆಂದು ಹೇಳಿಕೊಡುವಂತಿದೆ ಸುನೀಲರ ನಿಸ್ವಾರ್ಥ ಬದುಕು. ✡




## ನಕ್ಸಲಬಾರಿಯಿಂದ ಮಲೆನಾಡಿನವರೆಗೆ ಮೃತ್ಯುಮಾರ್ಗ

ಇದು ಫೆಬ್ರವರಿ ೧೫ನೆ ತಾರೀಖಿನಂದು **ವಿಜಯ ಟೈಮ್ಸ್ ಪತ್ರಿಕೆ**ಯಲ್ಲಿ ಶ್ರೀ ಪಿ.ಎನ್. ಬೆಂಜಮಿನ್ ಎಂಬುವರು ಬರೆದ ಲೇಖನದ ಶೀರ್ಷಿಕೆ. ೧೯೬೮ರಂದು ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಮೊಳಗಿದ ವಾಮಪಂಥೀಯರ ಬಂದೂಕುಗಳ ಮತ್ತು ಸಿಡಿಮದ್ದುಗಳ ಆರ್ಭಟ ಇಂದು ಕರ್ನಾಟಕದ ಮಲೆನಾಡಿನ ಪ್ರಶಾಂತ ಕಾಡುಗಳಲ್ಲಿ ಪ್ರತಿಧ್ವನಿಸಲಾರಂಭಿಸಿರುವುದು ನಂಬಲಸಾಧ್ಯವಾದರೂ ಸತ್ಯ ಸಂಗತಿ.

ಗ್ರಾಮೀಣ ಪ್ರದೇಶದಲ್ಲಿ ದಶಕಗಳಿಂದ ನಡೆಯುತ್ತಿರುವ ಈ ಘರ್ಷಣೆಯ ಕಾರಣಗಳು ಎರಡು ವಿಧ. ಒಂದು ಆರ್ಥಿಕ ಮತ್ತೊಂದು ಸಾಮಾಜಿಕ. ಭಾರತದ ಗ್ರಾಮೀಣ ವಿದ್ಯಾವಂತ ಯುವಜನತೆ ಈಗಿನ ಭ್ರಷ್ಟ, ಅನೈತಿಕ ರಾಜಕೀಯ ವ್ಯವಸ್ಥೆಯ ವಿರುದ್ಧ ಪ್ರತಿಕ್ರಯಿಸುವ ವಿಪರೀತ ಮಾರ್ಗವೇ ಈ ನಕ್ಸಲ ಮಾರ್ಗ. ನೂರಾರು ವರ್ಷಗಳ ಕಾಲ ಸಾಲಗಾರರು ಮತ್ತು ಜಮೀನ್ದಾರರ ಶೋಷಣೆಗೆ ಮತ್ತು ಸರ್ಕಾರದ ನಿರ್ಲಕ್ಷ್ಯಕ್ಕೆ ಸಿಕ್ಕಿ ನರಳಿದ ಸಣ್ಣರೈತರು, ಕೃಷಿ ಕೂಲಿಕಾರರು ಮತ್ತು ಬುಡಕಟ್ಟು ವರ್ಗದವರು ಮತ್ತು ದಲಿತರ ನೋವೇ ನಕ್ಸಲೀಯರ ಬಂದೂಕಿನ ದನಿಗಳಲ್ಲಿ ಮಾರ್ದನಿಸಿದೆ.

ಆದರೆ ಈ ಹಿಂಸಾಮಾರ್ಗ ಸರಿಯೇ? ಈ ಪ್ರಶ್ನೆಗೆ ಹಿರಿಯ ಸಾಹಿತಿಯೊಬ್ಬರು ಕೊಟ್ಟ ಮಾರ್ಮಿಕ ಉತ್ತರ: ನಕ್ಸಲರು ಎಷ್ಟೇ ಬಂದೂಕುಗಳನ್ನು ಬಳಸಿದರೂ ಸರ್ಕಾರದ ಹತ್ತಿರ ಅದಕ್ಕಿಂತ ಹೆಚ್ಚು ಬಂದೂಕುಗಳಿವೆಯೆಂಬುದನ್ನು ಅವರು ಮರೆಯಬಾರದು ಎಂದು. ಎರಡನೆಯದಾಗಿ ಬರಿಯ ಸಂಘರ್ಷವೇ ಸಮಾನತೆಗೆ ದಾರಿ ಎನ್ನುವ ವಾಮಪಂಥೀಯ ಸಿದ್ಧಾಂತ ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆಯೂ ಇಲ್ಲಿ ಏಳುತ್ತದೆ. ವಾಮಪಂಥೀಯ ಸಿದ್ಧಾಂತ ತನ್ನ ತವರೂರಾದ ರಷ್ಯಾ ಮತ್ತು ಚೀನಾಗಳಲ್ಲಿಯೇ ಸತ್ತಿರುವಾಗ, ಜೀವಂತ ಇದ್ದ ಸಮಯದಲ್ಲೂ ಯಾವ ಬಗೆಯ ಸಮಾನತೆಯನ್ನೂ ಅಲ್ಲಿ ಸಾಧಿಸಲು ಸಾಧ್ಯವಾಗದೆ ಹೋದಾಗ, ನಕ್ಸಲೀಯರ ಹಿಂಸೆಯ ಹಿಂದಿನ ಈ ಸಿದ್ಧಾಂತ ಅವೈಜ್ಞಾನಿಕ ಮತ್ತು ಬರಿಯ ಬೂಟಾಟಿಕೆ ಎನ್ನುವುದು ಎಂತಹವರಿಗೂ ಮನದಟ್ಟಾಗದೇ ಇರದು. ಹೀಗಾಗಿ ಒಂದು ಅಪ್ರಬುದ್ಧ ಸಿದ್ಧಾಂತದ ಪ್ರಸಾರಕ್ಕೆ ಹಿಂಸೆಯನ್ನು ಬಳಸಿಕೊಂಡು ಆ ಮೂಲಕ ಮುಗ್ಧ ಜನರ ಜೀವನವನ್ನು ಬಲಿ ತೆಗೆದುಕೊಂಡು ಆತಂಕವನ್ನು ಸೃಷ್ಟಿ ಮಾಡಿ ಅವರನ್ನು ಮತ್ತೂ ಸಂಕಷ್ಟಗಳ ಕಮರಿಯಲ್ಲಿ ಕೆಡವುತ್ತಿರುವ ನಕ್ಸಲೀಯರ ಕಾರ್ಯ ಕೂಡ ಆ ಬಡಜನರ ಮೇಲೆ ಆಗುತ್ತಿರುವ ಶೋಷಣೆಯ ಇನ್ನೊಂದು ಮುಖವಲ್ಲವೇ?

ಈ ಜ್ವಲಂತ ಸಮಸ್ಯೆಗೆ ಏಕಮಾತ್ರ ಸಮಾಧಾನ ಸ್ವಾಮಿ ವಿವೇಕಾನಂದರ ವೇದಾಂತ ಆಧಾರಿತ ಸಮತಾವಾದ. ಅವರ ಪ್ರಕಾರ ಸರ್ವರಲ್ಲೂ ಇರುವ ಆತ್ಮಚೈತನ್ಯದ ಪ್ರಜ್ಞೆಯಿಂದ ಉದಯಿಸಿದ ಸಮಾನತೆಯ ಭಾವವೇ ನಮ್ಮಲ್ಲಿ ನೈಜ ನೈತಿಕತೆಯ ಕಳಕಳಿಯನ್ನು ಸ್ಫುರಿಸಬಲ್ಲುದಾಗಿದೆ. ಆಗ ಮಾತ್ರ ನಾವು ನಿಜವಾದ ಅರ್ಥದಲ್ಲಿ ನಿಸ್ವಾರ್ಥಿಗಳಾಗುತ್ತೇವೆ. ಹೀಗೆ ಧರ್ಮ ನಮ್ಮಲ್ಲಿ ನೈತಿಕ ಪ್ರಜ್ಞೆಯನ್ನು ಕೆರಳಿಸುವ ಸಾಧನವಾಗಬೇಕು. ಧರ್ಮ ಕೇವಲ ಆಷಾಢಭೂತಿತನ, ಮೂಢ ನಂಬಿಕೆ ಮತ್ತು ಅರ್ಥರಹಿತ ಆಚರಣೆಗಳ ಕಂತೆಯಾಗಿರುವತನಕ ನಕ್ಸಲೀಯರು ಮಲೆನಾಡಿನ ಕಾಡೇನು, ಬಯಲುಸೀಮೆಗೂ ಬಂದಾರು, ನಿಮ್ಮ ಮನೆಯಂಗಳದಲ್ಲಿಯೆ ನಿಂದಾರು. ಅಲ್ಲಿಯತನಕ ನಾವು ಸುಮ್ಮನಿರಬೇಕೆ? ✡